ತೆಗೆದುಕೊಳ್ಳುತ್ತೇನೆ. ಔಷಧಿ ತಯಾರು ಮಾಡಲಿಕ್ಕೆ ಯಾರ್ಯಾರಿಗೆ ಎಷ್ಟೆಷ್ಟು ಕೊಡುತ್ತೀರಿ ಅಂದರೆ ಅದರ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ಒದಗಿಸುತ್ತೇನೆ.

ಅಧ್ಯಕ್ಷರು:- ಈಗ ಸಭೆ ಮುಂದುವರಿದು ಮಧ್ಯಾಹ್ನ 2 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳುವುದು.

(ಸಭೆಯು 1 ಗಂಟೆ 28 ನಿಮಿಷಗಳಿಗೆ ಮುಂದೂಡಲ್ಪಟ್ಟಿತು)

(ಸದನವು ಪುನಃ ಮಧ್ಯಾಹ್ನ 2-45ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಿಣಿ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ನಿಯಮ 334ರ ಮೇಲಿನ ಚರ್ಚೆ

(1) ಹೊಸ ವಾಣಿಜ್ಯ ಶಾಲೆಗಳನ್ನು ತೆರೆಯಲು ಅರ್ಜಿಗಳ ಶೀಘ್ರ ವಿಲೇವಾರಿ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಹೊಸ ವಾಣಿಜ್ಯ ಶಾಲೆಗಳನ್ನು ತೆರೆಯಲು ಡಿಡಿಪಿಐ ಆಫೀಸಿನವರು ವರ್ಷದಲ್ಲಿ ಎರಡು ಬಾರಿ ಅಂದರೆ ಮಾರ್ಚ್ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಅರ್ಜಿಗಳನ್ನು ಕರೆಯುವುದು ವಾಡಿಕೆ. ಮಾರ್ಚ 1992ರಲ್ಲಿ ಕರೆದಿದ್ದ ಅರ್ಜಿಗಳನ್ನು ಇತ್ಯರ್ಥ ಮಾಡಿ ಪರ್ಮಿಷನ್ ಕೊಡದೆ, ಅಕ್ಟೋಬರ್ 1992ರಲ್ಲಿ ಮತ್ತೆ ಅರ್ಜಿಗಳನ್ನು ಕರೆದಿದ್ದಾರೆ. ಇದು ಸರಿಯೆ? ಮಾರ್ಚ್ 1992ರಲ್ಲಿ ಕರೆದಿದ್ದ ಅರ್ಜಿಗಳನ್ನು ಇತ್ಯರ್ಥ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು? ಹೊಸ ವಾಣಿಜ್ಯ ಶಾಲೆಗೆ ಅರ್ಜಿಗಳನ್ನು ಹಾಕಬಯಸುವವರು ಬಾಡಿಗೆ ಆಧಾರದ ಮೇಲೆ ನಿವೇಶನವನ್ನು ತೆಗೆದುಕೊಂಡು ಕರಾರು ಪತ್ರದ ನಕಲನ್ನು ಅರ್ಜಿಯ ಜೊತೆ ಹಾಕಬೇಕಾಗಿದ್ದು, ಅದರಂತೆ, ಮಾರ್ಚ್ 1992ರಲ್ಲಿ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ನಿವೇಶನವನ್ನು ಬಾಡಿಗೆಗೆ ತೆಗೆದುಕೊಂಡಿದ್ದು ಕಳೆದ ಒಂದು ವರ್ಷದಿಂದ ಸುಮ್ಮನೆ ಬಾಡಿಗೆಯನ್ನು ಕಟ್ಟುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಇವರಿಗೆ ಪರ್ಮಿಷನ್ ಸಿಗುವುದೋ ಇಲ್ಲವೋ ಗೊತ್ತಾಗದೇ ಅಭ್ಯರ್ಥಿಗಳು ಕಳವಳದಿಂದಿದ್ದಾರೆ. ಅಭ್ಯರ್ಥಿಗಳಿಗೆ ಪರ್ಮಿಷನ್ ಸಿಕ್ಕಿದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ? ಏಕೆ ಇಷ್ಟು ವಿಳಂಬವಾಗಿದೆ? ಕಾನೂನು ಉಲ್ಲಂಘನೆ ಮಾಡಿರುವ ಈ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವಿರಿ? ಮಾರ್ಚ್ 1992ರಲ್ಲಿ ಅರ್ಜಿಗಳನ್ನು ಪರಿಗಣಿಸಿ ಇಲಾಖಾ ಅಧಿಕಾರಿಗಳ ಮೀಟಿಂಗ್ ಕರೆದು ಯಾವಾಗ ಪರ್ಮಿಷನ್ ಕೊಡಲಾಗುವುದು ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಉತ್ತರ ಇನ್ನೂ ಬಂದಿಲ್ಲ, ಉತ್ತರವನ್ನು ತರಿಸಿಕೊಡುತ್ತೇನೆ.

(2) ವನ್ಯ ಜೀವಿಗಳ ಸಂರಕ್ಷಣೆಗಾಗಿ ಅಗತ್ಯ ವೃತ್ತಗಳ ರಚನೆ

ಶ್ರೀಮತಿ ಸುಮಾವಸಂತಿ (ವಿರಾಜಪೇಟೆ):- ಮಾನ್ಯ ಉಪಾಧ್ಯಕ್ಷಿಣಿಯವರೆ, ವನ್ಯ ಜೀವಿಗಳ ಸಂರಕ್ಷಣೆಗಾಗಿ ರಾಜ್ಯದಲ್ಲಿ ಪ್ರತ್ಯೇಕವಾಗಿ ಎರಡು ವೃತ್ತಗಳನ್ನೂ, 8 ವಿಭಾಗಗಳನ್ನೂ ರಚಿಸಲಾಯಿತು. ವನಸಂಪತ್ತು, ವನ್ಯಜೀವಿಗಳ ಕೇಂದ್ರೀಕರಣ ಆಧಾರವಾಗಿ ಈ ಹೊಸ ವೃತ್ತ ಹಾಗೂ ವಿಭಾಗಗಳಾಗಿದ್ದರೆ ಆ ವ್ಯವಸ್ಥೆಯನ್ನು ಮೆಚ್ಚಬಹುದಾಗಿತ್ತು. ಆದರೆ ಈಗಿನ ಪರಿಸ್ಥಿತಿ ವಿಚಿತ್ರವಾಗಿದೆ. ಉದಾಹರಣೆಗೆ ತಲಕಾವೇರಿ ಸುತ್ತಮುತ್ತ ಇರುವ 105 ಚದರ ಕಿಲೋಮೀಟರ್ ಜಾಗವನ್ನು ತಲಕಾವೇರಿ ವನ್ಯಜೀವಿ ಧಾಮ ಎಂದು ಘೋಷಿಸಲಾಗಿದೆ. ತಲಕಾವೇರಿ ಭಾಗವನ್ನು ಮೊದಲು ಅಲ್ಲಿಂದ 8 ಕಿಲೋಮೀಟರ್ ದೂರದ ಭಾಗಮಂಡಲದ ಸಿಬ್ಬಂದಿ

ನೋಡಿಕೊಳ್ಳುತ್ತಿದ್ದರು. ಪ್ರತ್ಯೇಕ ವನ್ಯ ವಿಭಾಗ ರಚನೆ ಆದಬಳಿಕ 60 ಕಿಲೋಮೀಟರ್ ದೂರದ ಶ್ರೀ ಮರಗಲ ವಲಯದ ಮೇಲ್ವಿಚಾರಣೆಗೆ ಬರುತ್ತದೆ. ಪಕ್ಕದಲ್ಲೇ ಇರುವ ಸಿಬ್ಬಂದಿಯವರು ಈ ಗೊಡವೆಗೆ ಹೋಗುವಂತಿಲ್ಲ. ವನ್ಯಜೀವಿ ವಲಯದವರು ಬರುವಷ್ಟರಲ್ಲಿ ಕಾಡು ಸೂರೆ ಆಗಿರುತ್ತದೆ. ಇದೇ ರೀತಿ ಅನೇಕ ವೃತ್ತ ಹಾಗೂ ವಿಭಾಗಗಳಲ್ಲಿ ಜನರಿಗೆ ತೊಂದರೆ ಆಗಿರುವುದಾಗಿಯೂ, ಅಗತ್ಯವುಳ್ಳ ರಕ್ಷಣೆ, ಸವಲತ್ತಿಗಾಗಿ ದೂರ ಹೋಗಬೇಕಾಗಿದೆಯೆಂದೂ, ಅರಣ್ಯ ಇಲಾಖೆಯವರು – ವನ್ಯಜೀವಿ ವಿಭಾಗದವರು ಎಂದು ಇಲಾಖೆಯಲ್ಲಿಯೇ ಕಂದಕ ನಿರ್ಮಾಣವಾಗಿದೆಯೆಂದೂ, ಈ ಪ್ರತ್ಯೇಕತೆಯಿಂದ ಸುಮಾರು ಹತ್ತು ಮಂದಿ ಐ.ಎಫ್.ಎಸ್. ಅಧಿಕಾರಿಗಳಿಗೆ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಜಾಗ ಮಾಡಿಕೊಟ್ಟಂತಾಗಿದೆಯಲ್ಲದೆ, ಬೇರೇನೂ ಸಾಧನೆಯಾಗಿಲ್ಲವೆಂದೂ ಮಣ್ಣಿನ ರಚನೆ, ವನ್ಯಜೀವಿಗಳ ಅಸ್ತಿತ್ವ ಇತ್ಯಾದಿಗನುಗುಣವಾಗಿ ವೈಜ್ಞಾನಿಕವಾಗಿ ವಿಂಗಡಿಸಿ, ಅದಕ್ಕನುಗುಣವಾದ ಆಡಳಿತ ನಿರ್ವಹಣಾ ಸೂತ್ರ ರಚಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಡಿಸೌಜ (ಕಾರ್ಮಿಕ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೊಣೆ ಮಾಡುತ್ತೇನೆ.

1973ರಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ದೇಶದಲ್ಲಿರುವ ಅಭಯಾರಣ್ಯಗಳು ಮತ್ತು ವನ್ಯಧಾಮಗಳನ್ನು ನುರಿತ ವನ್ಯಪ್ರಾಣಿ ಸಂರಕ್ಷಣೆ ಮತ್ತು ನಿರ್ವಹಣಾಧಿಕಾರಿಗಳಿಂದ ವೈಜ್ಞಾನಿಕವಾಗಿ ನಿರ್ವಹಣೆ ಮಾಡುವ ಉದ್ದೇಶದಿಂದ ವನ್ಯಪ್ರಾಣಿ ಸಂರಕ್ಷಣೆ ಕಾಯ್ದೆ 1972ರ ಪ್ರಕಾರ, ಎಲ್ಲಾ ಅಭಯಾರಣ್ಯಗಳನ್ನು ಮತ್ತು ವನ್ಯಧಾಮಗಳನ್ನು ಗುರುತಿಸಿ, ಅದಕ್ಕೆ ಪ್ರತ್ಯೇಕ ನಿರ್ವಹಣಾ ವ್ಯವಸ್ಥೆಯನ್ನು ಮಾಡಬೇಕೆಂದು ಎಲ್ಲಾ ಮುಖ್ಯಮಂತ್ರಿಗಳಿಗೆ ಆದೇಶವಿತ್ತಿದ್ದರು. ಈ ಪ್ರಕಾರ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಅಭಯಾರಣ್ಯಗಳು ಮತ್ತು ವನ್ಯಧಾಮಗಳನ್ನು ಪ್ರತ್ಯೇಕವಾಗಿ ವಿಭಾಗಿಸಿ ಅವುಗಳ ನಿರ್ವಹಣೆ ಬಗ್ಗೆ ವಿಭಾಗಾಧಿಕಾರಿಗಳು ಮತ್ತು ಬೇಕಾದ ಸಿಬ್ಬಂದಿಯನ್ನು ನಿಶ್ಚಯಿಸಿ, ಸರ್ಕಾರಿ ಆದೇಶ ಸಂಖ್ಯೆ.ಎಹೆಚ್ಎಫ್ಎಫ್.83.ಎಫ್ಎನ್ಜಿ.92, ದಿನಾಂಕ 8.5.92ರಲ್ಲಿ ಆದೇಶವನ್ನು ಹೊರಡಿಸಲಾಯಿತು.

ವಿಭಾಗಗಳು

1. ಭದ್ರಾ ವನ್ಯಜೀವಿ ವಿಭಾಗ, ಚಿಕ್ಕಮಗಳೂರು.
2. ಕುದ್ರೆಮುಖ ವನ್ಯಜೀವಿ ವಿಭಾಗ, ಕಾರ್ಕಳ.
3. ದಾಂಡೇಲಿ ವನ್ಯಜೀವಿ ವಿಭಾಗ, ದಾಂಡೇಲಿ
4. ಶಿವಮೊಗ್ಗ ವನ್ಯಜೀವಿ ವಿಭಾಗ, ಶಿವಮೊಗ್ಗ
5. ಕಾವೇರಿ ವನ್ಯಜೀವಿ ವಿಭಾಗ, ಕನಕಪುರ
6. ಹುಣಸೂರು ವನ್ಯಜೀವಿ ವಿಭಾಗ, ಹುಣಸೂರು
7. ಚಾಮರಾಜನಗರ ವನ್ಯಜೀವಿ ವಿಭಾಗ, ಚಾಮರಾಜನಗರ
8. ಪ್ರಾಜಕ್ಟ್ ಟೈಗರ್ ವಿಭಾಗ, ಗುಂಡ್ಲುಪೇಟೆ.

ಮೇಲ್ಕಂಡ ಎಂಟು ವನ್ಯಜೀವಿ ವಿಭಾಗಗಳಲ್ಲದೆ, ಎರಡು ಪ್ರಾದೇಶಿಕ ವಿಭಾಗಗಳನ್ನು ಸಹ ಸರ್ಕಾರವು ಮೇಲ್ಕಂಡ ಆದೇಶದಲ್ಲಿ ನಿರ್ಮಾಣ ಮಾಡಿರುತ್ತದೆ.

1. ವೀರಾಜಪೇಟೆ ವಿಭಾಗ, ವೀರಾಜಪೇಟೆ.
2. ಮೈಸೂರು ಪಶ್ಚಿಮ ವಿಭಾಗ, ಹುಣಸೂರು.

ಆದರೆ, ಈ ಆದೇಶದಲ್ಲಿ ಫಾರೆಸ್ಟ್ ಬೀಟ್, ಫಾರೆಸ್ಟ್ ಸೆಕ್ಷನ್ಸ್ ಹಾಗೂ ರೇಂಜ್‌ಗಳ

ಪೂರ್ಣ ವಿವರಗಳು ಇಲ್ಲದಿರುವುದರಿಂದ ವ್ಯವಸ್ಥಿತ ಮೇಲ್ವಿಚಾರಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಸರ್ಕಾರವು ದಿನಾಂಕ 16-5-1992ರಂದು ಇನ್ನೊಂದು ಆದೇಶವನ್ನು ಸಂಖ್ಯೆ.ಎಹೆಚ್ಎಫ್ಎಫ್.83.ಎಫ್ಎನ್ಜಿ.92 ರಲ್ಲಿ ಹೊರಡಿಸಿತು.

ಇದರ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳಿಂದ ಪತ್ರಗಳು ಬಂದ ಮೇರೆಗೆ ಯಾವುದಾದರೂ ವಿಭಾಗದಲ್ಲಿ ಅಲ್ಲಿಯ ಜನರಿಗೆ ಈ ವ್ಯವಸ್ಥೆಯಿಂದ ತೊಂದರೆಯಾಗಿದ್ದರೆ, ಅದನ್ನು ಚರ್ಚಿಸಿ ಸರಿಪಡಿಸುವುದಕ್ಕೆ ಸರ್ಕಾರವು ಈಗಾಗಲೇ ಒಪ್ಪಿಕೊಂಡಿರುತ್ತದೆ. ಇದರ ಬಗ್ಗೆ ಒಂದು ಸಭೆಯನ್ನು ಕರೆದು ಚರ್ಚಿಸಿ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಗಿದೆ.

ಮೇಲ್ಕಂಡ 10 ವಿಭಾಗಗಳ ಪೈಕಿ, 2 ವಿಭಾಗಗಳಲ್ಲಿ ಮಾತ್ರ ಐಎಫ್ಎಸ್ ಅಧಿಕಾರಿಗಳಿದ್ದು, ಇವು ಈ ಹಿಂದೆ ಇದ್ದ ಹುಣಸೂರು ಮತ್ತು ಚಾಮರಾಜನಗರ ವಿಭಾಗಗಳಾಗಿರುತ್ತವೆ. ಉಳಿದ 8 ವಿಭಾಗಗಳಲ್ಲಿ ರಾಜ್ಯ ಅರಣ್ಯ ಸೇವೆಗೆ ಸೇರಿದ ಅಧಿಕಾರಿಗಳೇ ಇರುತ್ತಾರೆ. ಐಎಫ್ಎಸ್ ಅಧಿಕಾರಿಗಳಿಗೆ ಅಥವಾ ಬೇರೆ ಯಾವ ಉನ್ನತ ಅಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಈ ವಿಭಾಗಗಳನ್ನು ಸೃಷ್ಟಿ ಸಿರುವುದಿಲ್ಲ. ಅಲ್ಲದೆ ಇದಕ್ಕಾಗಿ, ಪ್ರತ್ಯೇಕ ನೇಮಕಾತಿಗಳನ್ನು ಮಾಡಿರುವುದಿಲ್ಲ.

ಭಾರತ ಸರ್ಕಾರವು ಸುಮಾರು ಶೇ.50ಕ್ಕಿಂತಲೂ ಹೆಚ್ಚಿನ ವನ್ಯಪ್ರಾಣಿ ರಕ್ಷಣೆ ಮತ್ತು ನಿರ್ವಹಣೆಗಾಗಿ ಧನಸಹಾಯ ಕೊಡುತ್ತಿರುವುದರಿಂದ ಹಾಗೂ ಭಾರತ ಸರ್ಕಾರದ ಆದೇಶ ಮತ್ತು ವನ್ಯ ಪ್ರಾಣಿ ಸಂರಕ್ಷಣೆ ಕಾಯ್ದೆ ಅನ್ವಯ ರಾಜ್ಯದಾದ್ಯಂತ ವನ್ಯ ಪ್ರಾಣಿ ಸಂರಕ್ಷಣೆಯನ್ನು ಉತ್ತಮ ಮಟ್ಟಕ್ಕೆ ತರುವ ಉದ್ದೇಶದಿಂದ ಹಾಗೂ ಎಲ್ಲಾ ಅಭಯಾರಣ್ಯಗಳು, ವನ್ಯಧಾಮಗಳು ವನ್ಯ ಪ್ರಾಣಿ ರಕ್ಷಣೆಯಲ್ಲಿ ನುರಿತ ಅಧಿಕಾರಿಗಳ ಆಡಳಿತದಲ್ಲಿ ತರುವ ಉದ್ದೇಶದಿಂದ, ಅಲ್ಲದೆ ಇದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚು ತಗುಲದಂತೆ ಈಗಾಗಲೇ ಇರುವ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಮರು ಹೊಂದಾಣಿಕೆ ಮುಖೇನ ಕಾರ್ಯಗತಗೊಳಿಸಲಾಗಿದೆ.

ಹೊಸದಾಗಿ ವನ್ಯ ಜೀವಿ ವಿಭಾಗಗಳನ್ನು ಹಾಗೂ ಪ್ರಾದೇಶಿಕ ವಿಭಾಗಗಳನ್ನು ನಿರ್ಮಾಣ ಮಾಡಿದ್ದರಿಂದ, ಐಎಫ್ಎಸ್ ಅಧಿಕಾರಿಗಳಿಗೆ ಯಾವುದೇ ಹೊಸದಾಗಿ ಜಾಗ ಮಾಡಿಕೊಟ್ಟಂತಾಗಿಲ್ಲ.

(3) ಸೋಮನಹಳ್ಳಿಯ ಹತ್ತಿರ ಶಿಂಷಾನದಿಗೆ ಅಡ್ಡವಾಗಿ ಹೊಸ ಸೇತುವೆಯ ನಿರ್ಮಾಣ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಸೋಮನಹಳ್ಳಿಯ ಸಮೀಪ ಶಿಂಷಾನದಿಗೆ ಅಡ್ಡಲಾಗಿ ಸೇತುವೆ ಇದ್ದು, ಈ ಸೇತುವೆ ನಿರ್ಮಾಣವಾಗಿ ಸುಮಾರು ನೂರೈವತ್ತು ವರ್ಷಗಳು ಸಂದಿವೆ. ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ವಾಹನ ಸಂಚಾರವು ದಟ್ಟವಾಗಿದ್ದು, ಈ ಸೇತುವೆಯ ಮೇಲೆ ವಾಹನ ಸಂಚಾರವು ಹಾದು ಹೋಗಬೇಕಾಗಿದೆ. ವಾಹನ ಸಂಚಾರದ ಒತ್ತಡ ಈ ಸೇತುವೆಯ ಮೇಲೆ ಅಧಿಕವಾಗಿದೆ. ಈ ಸೇತುವೆಯು ತುಂಬಾ ಹಳೆಯದಾದುದರಿಂದ ಅಧಿಕ ವಾಹನ ಸಂಚಾರದ ಒತ್ತಡವನ್ನು ತಾಳಲಾರದಷ್ಟು ಬಲಹೀನವಾಗಿದೆ.

ಈ ದಿಸೆಯಲ್ಲಿ ಶಿಂಷಾ ನದಿಗೆ ಅಡ್ಡಲಾಗಿ ಸೇತುವೆಯನ್ನು ಹೊಸದಾಗಿ ನಿರ್ಮಾಣ ಮಾಡುವ ಅವಶ್ಯಕತೆ ಬಹಳವಾಗಿತ್ತು. ಬಹು ವರ್ಷದ ಬೇಡಿಕೆಯ ಅನುಗುಣವಾಗಿ ಹೊಸ ಸೇತುವೆ ನಿರ್ಮಾಣ ಮಾಡಲು ಶಂಕುಸ್ಥಾಪನೆ ಆಗಿದೆ. ಈ ಶಂಕುಸ್ಥಾಪನೆ ಆಗಿ ಒಂದು ವರ್ಷ ಕಳೆದರೂ ಸಹ ಇನ್ನೂ ನಿರ್ಮಾಣ ಕಾರ್ಯ ಪ್ರಾರಂಭವಾಗಿಲ್ಲ. ಇದರಿಂದ ಸಾರ್ವಜನಿಕರಿಗೆ ಕಳವಳ ಉಂಟಾಗಿದೆ. ಈ ಸೇತುವೆ ನಿರ್ಮಾಣ ಕಾರ್ಯವನ್ನು ತಕ್ಷಣ ಪ್ರಾರಂಭಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.